ಹಾಗೆಯೇ ಆಗಲೆಂದು ಪರಮೇಶ್ವರನು ಕಥೆಯನ್ನುಪಕ್ರಮಿಸಿದನು. ಈ ಸಂದರ್ಭದಲ್ಲಿ ಒಳಗೆ ಯಾರನ್ನೂ ಬಿಡಕೂಡದೆಂದು ದ್ವಾರಪಾಲಕನಾದ ನಂದೀಶ್ವರನಿಗೆ ಆಜ್ಞೆಮಾಡಿ ಪಾರ್ವತಿಯು ಕಥಾಶ್ರವಣದಲ್ಲಿ ಮಗ್ನಳಾದಳು. ಆಗ ಪ್ರಮಥಗಣಗಳಲ್ಲಿ ಮುಖ್ಯನಾದ ಪುಷ್ಪದಂತನು ಪರಮೇಶ್ವರ ನನ್ನು ನೋಡಲು ಬಂದು ಬಾಗಿಲಲ್ಲಿ ನಂದಿಯಿಂದ ತಡೆಯಲ್ಪಟ್ಟನು. ಅಕ ಸ್ಮಾತ್ತಾಗಿ ಸಂಭವಿಸಿದ ಈ ಅಪಮಾನವನ್ನು ಸಹಿಸಲಾರದೆ ಪುಷ್ಪದಂತನು ಯೋಗಮಹಿಮೆಯಿಂದ ವಾಯುರೂಪನಾಗಿ ಒಳಹೊಕ್ಕು ಪ್ರಭುವು ಹೇಳು ತ್ತಿದ್ದ ಸಪ್ತವಿದ್ಯಾಧರ ಚರಿತ್ರೆಯೆಲ್ಲವನ್ನೂ ಕೇಳಿದುದಲ್ಲದೆ ಮನೆಗೆ ಬಂದು ಗೃಹಿಣಿಗೆ ಆಮೂಲಾಗ್ರವಾಗಿ ಹೇಳಿಬಿಟ್ಟನು. ಮರುದಿನ ಅದೇ ಕಥೆ ಯನ್ನು ಪುಷ್ಪದಂತನ ಪತ್ನಿಯೇ ಪಾರ್ವತೀದೇವಿಗೆ ಹೇಳತೊಡಗಿದಳು. ಇದರಿಂದ ಕಥೆಯು ಅಪೂರ್ವವಾದುದಲ್ಲವೆಂದು ನಿರ್ಧರಿಸಿ ಪಾರ್ವತಿಯು ಪತಿಯನ್ನಾಕ್ಷೇಪಿಸಿದಳು. ಪರಮೇಶ್ವರನು ಆಶ್ಚರ್ಯಗೊಂಡು ಜ್ಞಾನದೃ ಷ್ಟಿಯಿಂದ ವಸ್ತುತತ್ವವನ್ನು ತಿಳಿದು ಪುಷ್ಪದಂತನ ಅಪರಾಧವನ್ನು ಕಾಂತೆಗೆ ವಿವರಿಸಿದನು. ಪಾರ್ವತಿಯು ಅವನನ್ನು ಮರ್ತ್ಯನಾಗೆಂದು ಶಪಿಸಿದಳು. ಅವನ ಪರವಾಗಿ ಕರುಣೆಯನ್ನು ಬೇಡಿದ ಮಾಲ್ಯವಂತನೆಂಬ ಮತ್ತೊಬ್ಬ ಗಣಮುಖ್ಯನಿಗೂ ಅದೇ ರೀತಿ ಶಾಪಕೊಟ್ಟಳು. ಕೊನೆಗೆ ಮನಕರಗಿ ಶಾಪಾಂತವನ್ನು ಇಂತೆಂದು ಸೂಚಿಸಿದಳು—''ಕುಬೇರನ ಶಾಪದಿಂದ ಯಕ್ಷ ನೊಬ್ಬನು ವಿಂಧ್ಯಾರಣ್ಯದಲ್ಲಿ ಕಾಣಭೂತಿಯೆಂಬ ಪಿಶಾಚಿಯಾಗಿ ಜನಿಸು ವನು. ಅವನಿಗೆ ನೀನು ಈ ಕದ್ದ ಕಥೆಯನ್ನು ಹೇಳಿದರೆ ಶಾಪಮುಕ್ತನಾ ಗುವೆ. ಮತ್ತೆ ಅದೇ ಕಥೆಯನ್ನು ಕಾಣಭೂತಿಯಿಂದ ಕೇಳಿದಾಗ ಮಾಲ್ಯ ವಂತನು ಶಾಪಮುಕ್ತನಾಗುವನು.''

ತದನುಸಾರವಾಗಿ ಪುಷ್ಪದಂತನು ಕೌಶಾಂಬಿಯಲ್ಲಿ ಸೋಮದತ್ತ ನೆಂಬ ಬ್ರಾಹ್ಮಣನ ಮಗನಾಗಿ ಕಾತ್ಯಾಯನ, ಶ್ರುತಧರ ಮತ್ತು ವರರುಚಿ ಎಂಬ ಮೂರು ಹೆಸರುಗಳಿಂದ ಪ್ರಸಿದ್ಧನಾದನು. ಮಾಲ್ಯವಂತನು ದಕ್ಷಿ ಣಾಪಥದಲ್ಲಿ ಪ್ರತಿಷ್ಠಾನವೆಂಬ ಪಟ್ಟಣದಲ್ಲಿ ಗುಣಾಢ್ಯನೆಂಬ ಅನ್ವರ್ಥನಾಮ ವನ್ನು ಪಡೆದು ವಿಶ್ರುತನಾದನು. ಕಾಲಕ್ರಮದಲ್ಲಿ ಕಾತ್ಯಾಯನನಿಂದ ಕಾಣಭೂತಿಯೂ, ಕಾಣಭೂತಿಯಿಂದ ಗುಣಾಢ್ಯನೂ ಸಾಕ್ಷಾತ್ ಈಶ್ವರ ಪ್ರೋಕ್ತವಾದ ಸಪ್ತವಿದ್ಯಾಧರಚರಿತ್ರೆಯನ್ನು ಕೇಳಿ ತಮ್ಮ ತಮ್ಮ ಶಾಪ ದಿಂದ ವಿಮುಕ್ತರಾದರು.

ಕಥೆಯು ಲೋಕದಲ್ಲಿ ಪ್ರಚಾರವಾದುದು ಒಂದು ವಿಚಿತ್ರಪ್ರಕರಣ. ಗುಣಾಢ್ಯನು ಶಾತವಾಹನನೆಂಬ ದೊರೆಗೆ ಮಂತ್ರಿಯಾಗಿದ್ದನು. ಒಂದು ಸಂದರ್ಭದಲ್ಲಿ ಕಾತಂತ್ರವ್ಯಾಕರಣಪ್ರಣೇತನಾದ ಶರ್ವವರ್ಮನಿಂದ ಪರಾ

ಜಿತನಾಗಿ ಗುಣಾಢ್ಯನು ಪ್ರಚಾರದಲ್ಲಿದ್ದ ಮೂರು ಭಾಷೆಗಳಲ್ಲಿಯೂ ಮಾತನಾಡುವುದಿಲ್ಲವೆಂದು ಮೌನವ್ರತವನ್ನು ತಾಳಿ ಕಾಡಿಗೆ ಹೊರಟುಹೋದನು. ಅಲ್ಲಿ ಪಿಶಾಚರೂಪನಾದ ಕಾಣಭೂತಿಯಿಂದ ವಿದ್ಯಾಧರರ ಕಥೆಯನ್ನು ಕೇಳುವಾಗ ಅವನ ಇಷ್ಟಾನುಸಾರ ಅದನ್ನು, ಅಂದರೆ ಏಳು ಲಕ್ಷಶ್ಲೋಕಗಳ ಪರಿಮಿತಿಯುಳ್ಳ ಆ ಕಥೆಯನ್ನು, ಮರದ ಎಲೆಗಳ ಮೇಲೆ ರಕ್ತದಿಂದ ಬರೆದು ದೊರೆಯ ಹತ್ತಿರಕ್ಕೆ ಕಳುಹಿಸಿದನು. ಮದೋನ್ಮತ್ತನಾದ ದೊರೆಯು "ಭಾಷೆ ಪೈಶಾಚಿ, ಬರೆದಿರುವುದು ರಕ್ತದಲ್ಲಿ, ಬರೆದವನು ಮಾತುಮರೆತ ಉನ್ಮತ್ತ" ಎಂಬುದಾಗಿ ನಿರಾಕರಿಸಿದನು. ಅನಂತರ ಗುಣಾಢ್ಯನು ಗ್ರಂಥವನ್ನು ಗಟ್ಟಿಯಾಗಿ ಓದುತ್ತಾ ಒಂದೊಂದಾಗಿ ಎಲೆಗಳನ್ನು ಅಗ್ನಿಯಲ್ಲಿ ಹೋಮಮಾಡಿದನು. ಮೃಗಪಕ್ಷಿಗಳೆಲ್ಲವೂ ಅನ್ನಾಹಾರಗಳನ್ನು ತ್ಯಜಿಸಿ ಕಥೆಯನ್ನು ಕೇಳತೊಡಗಿದವು. ರಾಜನು ಈ ವೃತ್ತಾಂತವನ್ನು ವ್ಯಾಧರಿಂದ ತಿಳಿದು ಬೇಗ ಗುಣಾಢ್ಯನ ಹತ್ತಿರ ಬಂದು ನೋಡುವಲ್ಲಿ ಇನ್ನು ಒಂದು ಲಕ್ಷ ಗ್ರಂಥಮಾತ್ರ ಉಳಿದಿತ್ತು. ಅದನ್ನು ಆದರದಿಂದ ಸ್ವೀಕರಿಸಿ ಗುಣಾಢ್ಯನನ್ನು ವಂದಿಸಿ ನೃಪನು ನಗರಾಭಿಮುಖನಾದನು. ಗುಣಾಢ್ಯನು ಶಾಪಮುಕ್ತನಾಗಿ ಕೈಲಾಸವನ್ನೈದಿದನು.

ಪ್ರಕೃತ, ಉದಯನ ನಾಮಾಂಕಿತನಾದ ವತ್ಸರಾಜನ ದೀರ್ಘಚರಿತ್ರೆಯಲ್ಲಿ ಅಗ್ರಮಹಿಷಿಯಾದ ವಾಸವದತ್ತೆಯನ್ನು ಅವನು ಮದುವೆಯಾದುದೆಂತೆಂಬ ಭಾಗವನ್ನು ಮಾತ್ರ ವ್ಯಾಸದಾಸಾಪರಾಖ್ಯನಾದ ಕ್ಷೇಮೇಂದ್ರ ಮಹಾಕವಿಯ ಬೃಹತ್ಕಥಾಮಂಜರಿಯಿಂದ ಗದ್ಯರೂಪದಲ್ಲಿ ಸಂಗ್ರಹಿಸಿ ಹೇಳಿದೆ.

उदयनकथा

१

पुरा किल भारते वर्षे[126] कौशाम्बी नाम नगर्यासीत् । तत्रार्जुनाभिजने[127] जातो जनमेजयसम्भवश्शतानीको नाम राजाऽभवत् । तस्य राज्याब्धेः कर्णधारो[128] युगन्धरो नाम महामतिर्मन्त्री बभूव । कदाचिन्मृगव्यप्रसङ्गेन[129] निर्गतस्स राजा तेजसां राशिं शाण्डिल्यं मुनिं ददर्श । पुत्रकामस्य राज्ञो वरदो भूत्वा स महामुनिः कौशाम्बीमेत्य पुत्रेष्ट्या तं याजयामास[130] । एवं मुनिप्रसादेन दशरथोपमस्स राजा राममिव सहस्रानीकमात्मजं प्राप । कदाचित्सम्प्राप्ते देवासुरसम्पराये[131] शतानीको देवान् प्रेक्षकान् विधायाशेषान् दितिजान् जघान । परं तु स्वयमेव निहतो रणमूर्धनि । तदनु मन्त्रिणां गिरा शतानीकतनयस्सहस्रानीको राज्यं भेजे ॥

क्रमेण चासौ सहस्रानीको ब्रह्मणश्शापान्मर्त्यत्वमापन्नामप्सरसमलम्बुसामयोध्याधिपतेः कृतवर्मणः पुत्रीं मृगावतीं नाम ललनामुवाह । सा राजमहिषी तस्माद्गर्भमादाय रजनीकरगर्भिणी[132] पौरन्दरी दिगिव सुन्दरी रराज । अन्तर्वत्न्या[133]स्तस्या रक्तसरःस्नाने मतिरुदयौ । भूपतिश्च तामनिवार्यां बह्वमन्यत । मन्त्रकुशलस्स[134] राजा क्षणादेव कौसुम्भसलिल[135]स्थानं सरः कारयामास । इत्थं विलोभितां[136] राज्ञीं स्नानोद्यतां सरस्तीर आमिषधिया सुपर्णकुलसम्भवो विकटः[137] पक्षी दग्धविधेर्वशाद्धन्त

जहार । मोहविवशां च तां विहायसि सुदूरं नीत्वोदयाचलकन्दरे तत्याज । शनैर्लब्धसंज्ञा राजमहिषी भयाद्वेपमाना चकितेक्षणैर्दिशः कीर्णोत्पला इव चकार[138] । विललाप चातिमात्रं विरहाभिभूता भर्तारमनुस्मरन्ती । गजसिंहादीनां श्वापदानामाहारतामपि रुचिरतमाममन्यत[139] । विपद्विसङ्कटे काले कुतो वा मरणं लभ्यत इति बत नाज्ञासीत् सा वराकी[140] । तदस्याः करुणाक्रन्दितमाकर्ण्य मृगा अप्यश्रुलोचना विच्छिन्नरोमन्था[141] निस्पन्दगतय[142]श्चाभवन् । अस्मिन्नवसरे यदृच्छागतः कश्चिन्मुनिपुत्रस्तां विलोक्य करुणासिन्धुः स्वतपोवनं निनाय । तत्र महर्षिणा जमदग्निना सुतेवाश्वासिता सती पार्वती सेनान्यमिव काले तनयमसूत । जननसमकाल एव तस्याकाशभवा वाणी उदयनाभिधां चकार । मुनीन्द्रेणाश्रमे कृतचूडादिकः स बालकशशी मातुर्मनोरथैस्समं[143] ववृधे ॥

कदाचिद्युवायं नयननन्दनो मृगयासक्तो व्याधबद्धं कञ्चन भुजङ्गममपश्यत् । दीनं भुजगमालोक्य दयार्द्रो धनार्थिने शबराय मातृदत्तं स्वकङ्कणं वितीर्य तममोचयत् । एवं मोचितस्स सर्पो नागो भूत्वा उदयनकुमारेण सह सख्यं विधाय तं पातालमनयत् । तत्र किन्नराभिधानो नागः प्रेमविनतस्तं वयस्यमपूजयत् । अदाच्च तस्मै ललितानाम्नीं स्वभगिनीम् । तद्गर्भाधानपर्यन्तशापा सापि भुजङ्गमी वल्लभमामन्त्र्य विद्याधरपदं ययौ । घोषवत्यभिधां दिव्यां वीणां फणीन्द्रात्प्राप्योदयनोऽपि स्वाश्रयं[144] प्रापत । पुत्रस्य चिरविप्रोषणेन दुःखार्तां मुनीन्द्राश्वास्यमानां जननीमेत्य तामानन्दयामास ॥

अत्रान्तरे स शबरः[145] कौशाम्ब्यां सहस्रानीकनामाङ्कितं मणिकङ्कणं विक्रेतुं वणिजमुपजगाम । भीतो वणिक् रत्नकटक[146]

मादाय शबरेण साकं राजानं शरणं गतः । नृपस्तु मृगावतीवियोगाग्निना दह्यमानतनुः शबरेण विस्तृतां[147] कङ्कणप्राप्तिकथां श्रुत्वा हृष्टस्तमग्रतः कृत्वा [148]स्वपुत्रकलत्रसमागममभिकाङ्क्षन् निर्गत्य, जम्भारिपालितां[149] ककुभं सुचिरं विचरन् निर्वैरहारिकुञ्जरं[150] जमदग्न्याश्रममवाप । तत्र मुनिना पूजितो विरहार्दितां दयितामुदयनं च तनयं लेभे । तदनु महर्षिणाभ्यनुज्ञातः प्रियासहाय उदयनकुमारं गृहीत्वा मन्त्रिभिर्वृतः कौशाम्बीं प्राविशत् । अचिराच्च तस्मै कुमाराय समर्थाय राज्यश्रियं, सहायार्थं युगन्धरादीनां मन्त्रिसेनापतिविदूषकाणां पुत्रांश्च[151] ददौ । एवमस्य राजसूनोर्मन्त्री यौगन्धरायणः, सेनापती रुमण्वान्, [152]नर्मसुहृद्वसन्तकोऽप्यभूवन् । सहस्रानीको राजा जायया चिरं विहृत्य कीर्त्येव जरया वृतः, पवनाकम्पिकदलीदललोलां[153] भवस्थितिं धिया कलयन् सहामात्यो महापथं प्रायात्[154] ॥

२

अथासौ राजोदयनः कुलक्रमागतं वत्सराज्यं समासाद्य, अद्भुतैः स्वसाहसैः किरीटिचरिताश्चर्ये जनं श्लथादरं[155] चक्रे । क्रमेण च यौगन्धरायणन्यस्तराज्याचिन्ताभारः[156] वीणाविनोदेन कालमनयत्; मृगव्यामसेवत च । अत्रान्तरे श्लथारम्भमेनं ज्ञात्वोज्जयिनीपतिश्चण्डमहासेनस्तज्जयाय मनश्चकार । तस्य सुता वासवदत्ता नाम लावण्यार्णवा कन्या बाहुशालिनो वीरस्य गान्धर्वनिपुणस्य च तस्यैवोदयनस्य योग्येति चामन्यत । परं तु निसर्गशत्रुः[157] कथमभ्यर्थ्यो भवति महासेनस्य? मानी वत्सेशः कथं वा स्वयं याचेत? किञ्च बहुदुर्गो महाकोशो रक्तामात्यो[158] विशालधीरसावुदयनो मृगयाच्छद्मना[159] विनोपायै[160] नैव

वश्य इति निश्चित्य देव्या दुर्गायाः प्रसादेन[161] समुत्तेजितो महासेनः, योऽयं वीणानादहृतान् कुञ्जरान् वने नित्यं बध्नाति स क्रूरनागेनैव ग्राह्य इति धियं व्यधात्। कृतकप्रणयोपायनै[162]स्सह वत्सेश्वराय सन्देशहारिणं दूतं प्राहिणोत्—"कुलसर्वस्वमियं मे पुत्री वीणायां गान्धर्व[163]वेदिनस्तव शिष्यतामभिवाञ्छति। तत्प्रणयादुज्जयिनीमागत्योपकर्तुमर्हति देवः। यतो महतामर्थनासु सन्तो निषेधं न शिक्षिताः[164] खलु" इति। श्रुत्वेदं पदाहतः फणीव रोषाविष्टो राजा—"वीणां वासवदत्तासौ ज्ञास्यत्यभ्येत्य मत्पुरीम्। शिष्यो गुरुगृहं याति न हि शिष्यगृहं गुरुः" इति प्रतीपसन्देशं[165] व्याजहार। मन्त्री यौगन्धरायणोऽप्यवन्तिभूभुजेऽ[166]तीव चुकोप[167]। अतिमात्रं कोपन बद्धभ्रुकुटि[168]स्संरम्भाकम्पिकुण्डलो[169] वीरो यौगन्धरायणः प्राह—"पश्येमं सम्मोहाध्मातचेतसो[170] राजपशोर्दर्पम्। मिथ्याप्रणयवादिनमेनं सानुबन्धं बद्ध्वा यास्यामि कोपजलधेः पारम्[171]। विधीयतां सेना" इति। भूयोऽप्येवं राजानं ज्ञापयामास—देव सुखसक्तेन त्वयैव खलु हन्त प्रतापो दिक्षु शीततां नीतः[172]। मृगयासक्तं भवन्तं विज्ञाय प्रतिसामन्तैः किञ्चिदुच्चैःकृतं शिर इति भाति[173]। नरनाथ प्रणयेनेव ललनाः, विनयेनेव कीर्तयः, कुनयेन[174] नृपश्रियश्च नश्यन्ति। देवी विन्ध्यवासिनी यस्मै स्वयं कृपाणं ददौ सोऽयं राजा चण्डमहासेनो विजेतुं न शक्यते। नडागिरिर्नाम गिरीन्द्राभो गजेन्द्रस्तस्य विद्यते, यस्य पुरतो दिग्द्विपा अपि वैमुख्यं[175] यान्ति। एकदा तदारूढो मृगयानिर्गतो राजा[176] क्रोडरूपिणं दैत्यमङ्गारकाख्यं हत्वा तदात्मजां रूपलावण्यशालिनीमङ्गारवतीमुपयेमे[177]। तस्यां च गोपालपालकौ पुत्रौ सुतामेकां च लेभे। सा च पुत्री स्वप्ने वासवसूचिता वासवदत्तेति

प्रथिता विद्याधरेश्वरं तनयं प्रसविष्यतीति श्रूयते" इत्यादि मन्त्रिणस्सदृशा उक्तीः कर्णे किल[178] कृतवान् । किन्तु राजसुताचिन्तयैवाक्रान्तस्वान्तो[179] बभूव ॥

अत्रान्तरे वत्सस्य प्रतिसन्देशं श्रुत्वा महासेनो व्याकुलो भूत्वोदयनग्रहणे सन्नाहमकरोत् । शैलसङ्काशं महागजमम्भःकृतपदं[180] कृत्वा विन्ध्याटव्यां विससर्ज । विलासालसगतं विलोलश्रवणाननं सुरगजाकारं तं व्याधमुखाच्छ्रुत्वोदयनः पण्डितमानी[181] तुरगप्रायं सैन्यमटवीमुख एव त्यक्त्वा गजेन्द्रबन्धकुशलो[182] महद्वनमेक एव विवेश । तत्राहङ्कारमिवोन्नतं संसारमिव निस्सारमैश्वर्यमिव चञ्चलमधर्ममिव मायाढ्यं महानागं[183] ददर्श । वीणामधुरगीतिभिस्तं[184] कूटकुञ्जरं जिघृक्षु[185] र्मुधा तस्थौ । क्वासौ[186] यन्त्रकृत्रिमो हस्ती, क्व च वीणया तद्ग्रहः! नूनं व्यसनासक्तिर्महतामपि मोहाय भवति[187] । घोषवतीव्यग्रे तस्मिन् योधाः कुञ्जरान्निर्गत्य सहसा तमभ्याययुः । तान् दृष्ट्वा लेशतोऽप्यशङ्कितो धैर्यनिष्कम्पमानस[188] स्तान् सुभटान् रणे जघान । किन्तु तेष्वेको वीरवरश्छद्मना नृपं जग्राह । उज्जयिनीपतिस्तच्छ्रुत्वा स्वयमेवागत्य वत्सराजं प्रणम्य व्यजिज्ञपत्—"राजेन्द्र, मान्योऽसि मे; न हि मे किल्बिषं[189] त्वयि । इयं मे तनया वीणागेयकलाज्ञाने[190] तव शिष्या भवतु" इत्युक्त्वा वासवदत्तामस्मै व्यवेदयत् । नीलनीरजलोचनां तां विलोक्य राजा स्मरशराहतस्तरलोऽ[191] भवत् । राजपुत्री च तं वीक्ष्य लज्जानतमुखी बभौ[192] । प्रेमप्रणयशालिन्या तया सेव्यमानो नृपो राज्यस्थितिं विसस्मार । सा च तरलाक्षी वीणायां निर्विशेषं प्रावीण्यमधिजगाम ॥

अस्मिन्नवसरे तथाभूतं वत्सनरेश्वरमाकर्ण्य दुःखितो यौगन्धरायणस्सेनापतिना पौरैश्च सह सम्मन्त्र्य तदुद्धरणाय

निर्ययौ । योगकोविदोऽसौ सचिवः शीघ्रमेवोज्जयिनीं प्राप्य निशि [193] महाकालश्मशानमावसत् । तच्च कपालशकलाकीर्णं चटत्कारचितानलं श्मशानमतीव भयावहमासीत् [194] । तत्र योगेश्वराख्येन ब्रह्मरक्षसा मित्रत्वं प्राप्य रूपपरावृत्तियोगं [195] महामतिरयं लेभे । क्षणादेव खल्वाटो[196]बभूव, पञ्चचूडो [197] महाहनु [198] र्लम्बोदरस्तनुग्रीवः ककुदी [199] जरसार्दितः । सहायो वसन्तकोऽपि तेनैव क्षिप्रं विरूपतां नीतः । ततो धीमान् यौगन्धरायणो राजमार्गं प्राप्य स्खलद्गति [200] र्गायन् हसन् पठन् धावन् कन्यकान्तःपुरोपान्त उन्मत्त इव विचचार । तत्र कौतुकान्नारीभिर्गान्धर्वशालिकां नीतः कन्यागुरुं स्वामिनं सुसंयतं समालोक्य रुरोद । योगमहिम्ना रहसि युक्तं तेन समाभाष्यान्तर्हितो [201] ऽभूत् । वत्सेश्वरोऽपि स्वमन्त्रिवरसकाशाद्योगं प्राप्य मन्त्रसङ्केतविपरीतं [202] वसन्तकमपि ददर्श । विविधालापैरस्य चलनैर्वलनैश्च [203] राजकन्यका गाढं रञ्जिता ॥

अथ यौगन्धरायणो राजानं स्वैरमभ्येत्य विमुक्त्युपायं सम्मन्त्र्य योगं च दत्वा निवृत्तः । वत्सोऽपि प्ररूढगाढविस्रम्भां [204] राजपुत्रीं प्रेमबन्धवशीकृतां ज्ञात्वा, भद्रवतीं नाम भद्रां[205] लक्षणोचितां[206] करिणीमादाय, हस्तिपकमाषाढकं [207] दानैर्वशीकृत्य, वसन्तकेन सहितः, वासवदत्तया तत्सख्या प्रेमविश्वासभुवा[208] काञ्चनमालया च सार्धं, निशि सर्वायुधोपेतो नगररक्षिणो[209] हत्वा जवान्नगरादपससार ॥

अथ निर्याते वत्सेशे पालकः कुपितो भूत्वा नडागिरिं समारुह्य तमभ्यधावत् । अवन्तिपस्त्वेतदाकर्ण्य गोपालमादिशत्—'कोपन[210] श्चायं पालकः, परं तु वत्सेश्वरो नो[211] मान्यः । तद्गच्छ जवाद्युद्धं च निवारय' इति । एवमाज्ञप्तो गोपालस्सुग्रीवाख्यं

तुरङ्गममारुह्य भ्रातृनिवर्तनाय तूर्णं ययौ । भद्रवत्यारूढो वत्सेश्वरस्त्वरं पलायमानोऽपि सुरद्विपपरावतारेण नडागिरिणाचिरादेवाक्रान्तान्तरोऽभवत् । परन्त्विदमेवाश्चर्यं यत्तथाविधवीर्यमदमत्तोऽपि, युद्धसन्नद्धेन कृतिना पालकेन प्रेरितोऽपि नडागिरिर्भद्रवतीं भगिनीं दृष्ट्वा विकोप[212]स्समजायत । आकर्णाञ्चितकोदण्डः[213] पालकश्चाग्रे भगिनीमालोक्य विरराम[214] । धैर्यनिधी राजा[215] निर्दयोद्धूतधन्वा पालकस्य चक्रतोमरकार्मुकं[216] चिच्छेद । अत्रान्तरे जवनैर्हयैस्समभ्येत्य गोपालः पितुराज्ञया पालकं स्वपुरमेव निनाय । एवं निवृत्तयो राजपुत्रयोर्वत्सराजस्स्वविषयं प्रति चचाल । अन्येद्युर्मध्याह्ने मार्तण्डे प्रचण्डकिरणे सत्याषाढको नृपमेत्य करिणी भृशं तृषार्तेति निवेदयामास । ततोऽतीव पीडिता भद्रवती तडागमासाद्य हन्त विषदूषितं जलं कामं पीत्वा भुवि निपपात । परन्त्वनुपदमेव विद्याधरीभूत्वा सा राज्ञस्सेवया शापान्मुक्तेति पूर्ववृत्तं निवेद्य भूयोऽपि भाविनस्तस्य पुत्रस्य सर्वविद्याधरप्रभोरुपकारिणी भविष्यामीति सप्रश्रय[217]मुक्त्वान्तरधात् । वत्सोऽपि तां कृतज्ञतयानुस्मरन् निकटस्थं निषादाधिपतिं मित्रमामन्त्र्य पथि दस्युगणं हत्वा तत्पुरीमाससाद । तत्र हि निजवेषधृता यौगन्धरायणेन सङ्गतो निर्भरं ननन्द । रत्नाश्वरथकुञ्जरान् समादाय गोपालोऽवन्तिभूभुजादिष्टो वत्सेशविवाहमभ्येतीति [218]सार्थवाहवाक्यं श्रुत्वा सर्वे समाहिता बभूवुः । विदूषकोऽपि कथाप्रियां वासवदत्तां विविधाभिः कथाभी[219] रञ्जयाञ्चकार । अथ प्राप्ते गोपालके महान् विवाहोत्सवः प्रवृत्तः । राजा देव्या सह विवाहवसुधां हर्षोत्फुल्लनयनः प्रविवेश । देवी च वृत्ततारहारविभूषिता[220] राजते स्म । विक्षिप्तलाजकुसुमा[221] विवाहमही देवीमुखशशिप्रीत्या नक्षत्रैस्सेवितेव[222] बभौ । एवं सम्भ्रमेण निर्वृत्ते वासवदत्तापरिणये

सर्वे पौरजानपदा अमात्याः प्रकृतयश्च नितान्तं सन्तुतुषुः । मन्त्रिसेनापती यौगन्धरायणरुमण्वन्तौ विवाहोत्सवसङ्गिनां[223] नानादेशनिवासिनां भूमिपालानां पौराणां च यथोचितां पूजां मुदा व्यधाताम् । गोपालोऽपि वत्सेश्वरमभिनन्द्य स्वपुरीं प्रयातः । एवमनुरूपभर्तृगामिनी वासवदत्ता, अनुपमसुन्दरीसमागमसंवर्धितविभवो वत्सराजः, विषमेष्व[224]प्यचलया भक्त्यासदृशधिया शक्त्या च स्वामिसेवां निर्वर्तयन्नमात्याग्रणीर्यौगन्धरायणस्तत्सहायो महाबलस्सेनानी रुमण्वान्, हास्यकुशलः कथाकोविदो वसन्तकश्चैते स्वेषु स्वेषु कार्येषु कृतार्थतां याताः परां कोटिमानन्दस्याध्यगच्छन् ॥

टिप्पणी

सुभाषितमञ्जरी

1. **मञ्जरिः—री**—(ಸ್ತ್ರೀ) ಹೂಗೊಂಚಲು. **2**. ಸಾಮಾನ್ಯವಾದ ಮಧು (ಮದ್ಯ) ಪಾನಮಾಡಿದರೆ ಜ್ಞಾನತಪ್ಪುವುದು. ಆದರೆ ಶ್ರೀ ಮುಕುಂದನ ಚರಣಕಮಲಗಳ ಮಧುವನ್ನು ಸೇವಿಸಿದರೆ ಜ್ಞಾನತಪ್ಪುವುದಿಲ್ಲ ; ಸೇವಿಸದಿದ್ದರೆ ಜ್ಞಾನತಪ್ಪುವುದು. ಇದು ನಮಗೆ (ನಃ) ಪರಮಾಶ್ಚರ್ಯವು. ಅಂದರೆ ದೇವದೇವನ ಚರಣಸೇವೆಯನ್ನು ಮಾಡಿದರೆ ಜ್ಞಾನೋದಯವಾಗುವುದು ; ಇಲ್ಲದಿದ್ದರೆ ಅಜ್ಞಾನದಲ್ಲಿಯೇ ಮುಳುಗಿ ಭ್ರಾಂತರಾಗುವೆವು. **अपायिनः**–ಕುಡಿಯದೇ ಇರುವವರು; ಪ್ರಥಮಾ ಬಹುವಚನ. **3. बुध इवाचरति बुधायते**—(ನಾಮಧಾತು) ಹಾಗೆಯೇ **गुणायन्ते दोषायन्ते. 4**. ಮೋಕ್ಷ ಬೇಕು, ಮೋಕ್ಷ ಬೇಕು ಎಂಬ ಜನರ ಹಂಬಲಿಕೆ (ಆಸಕ್ತಿ) ಏನು ಹೇಳಬೇಕು ! **व्यसनम्** (ನ)—-ಅತಿಶಯವಾದ ಆಸಕ್ತಿ. **5**. ಅಪಮಾನದಿಂದ ಮುಖ ಕಪ್ಪಾಗುವುದು. ನಿರಾಶೆಯಿಂದ ಎದೆ ಕಲ್ಲಾಗುವುದು. ಹೆದರಿಕೆಯಿಂದ ಓಡಿಹೋಗುವುದು. ಇವು ಅಪಜಯದ ಲಕ್ಷಣಗಳು. ಈ ಲಕ್ಷಣಗಳು ದ್ರಾಕ್ಷಿ, ಸಕ್ಕರೆ, ಮತ್ತು ಅಮೃತ ಇವುಗಳಿಗೆ ಸಹಜವಾದರೂ ಸುಭಾಷಿತಮಾಧುರ್ಯದ ಮೇಲ್ಮೆಯಿಂದ ಪರಾಜಿತಗಳಾಗಿ ಅವು ಈಪರಿಯಾದುವೆಂದು ಕವಿಯು ಉತ್ಪ್ರೇಕ್ಷಿಸಿದ್ದಾನೆ. ಸುಭಾಷಿತಪ್ರಶಂಸೆ. **6**. ಶಿವನು ಗುಣರೂಪನಾದ ಚಂದ್ರನನ್ನು ತಲೆಯಮೇಲೇರಿಸಿದ್ದಾನೆ. ದೋಷರೂಪವಾದ ವಿಷವನ್ನು ಕಂಠದಲ್ಲಿ ಬಂಧಿಸಿದ್ದಾನೆ. ಹಾಗೆಯೇ ಪ್ರಾಜ್ಞರು ಇತರರ ಗುಣಗಳನ್ನು ತಲೆದೂಗುತ್ತಾ ಹೊಗಳುತ್ತಾರೆ ; ಅವಗುಣಗಳನ್ನು ಗಂಟಲಿನಲ್ಲಿಯೇ ತಡೆಯುತ್ತಾರೆ. ಅಂದರೆ ಪ್ರಸ್ತಾಪಿಸುವುದು ಕೂಡ ಇಲ್ಲ. **नियच्छति—नि√यम् I प**—ವರ್ತಮಾನಕಾಲ (**लट्**) ಪ್ರ. ಏ. **7. निहितभाराः**—ಎರಡು ವಿಧವಾದ ಭಾರ; ಉಪಕಾರಹೊಂದಿದ ಭಾರ ಒಂದು, ವಾಸ್ತವವಾಗಿ ಎಳನೀರಿನ ಗೊನೆಗಳ ಭಾರ ಮತ್ತೊಂದು. ಉಪಕಾರವನ್ನು ಮರೆಯಬಾರದೆಂಬ ನೀತಿಗೆ ತೆಂಗಿನಮರದ ಸಾಮ್ಯವು ಬಹಳ ಯುಕ್ತವಾಗಿದೆ. **8. विरमन्ति**–ಸುಮ್ಮನಾಗುತ್ತಾರೆ. **वि, आ, परि**–

ಎಂಬುಪಸರ್ಗಗಳ ಯೋಗವಿದ್ದಲ್ಲಿ ಆತ್ಮನೇಪದವಾದ √रम् ಪರಸ್ಮೈಪದವಾಗುತ್ತದೆ. **रमते, विरमति. 9. अभिभवस्य गन्धो यासां यासु वा ताः अभिभवगन्धाः। ता न भवन्तीत्यनभिभवगन्धाः**–ಇತರರ ವಿಷಯವನ್ನು ಪ್ರಸ್ತಾಪಿಸುವಾಗ ತೇಜೋವಧೆಯ ರೂಪವಾದ ಗಂಧಕೂಡ ಸಜ್ಜನರ ಮಾತಿನಲ್ಲಿರುವುದಿಲ್ಲ. **10. श्रुतम्** (ನ)—1. ವಿದ್ಯೆ 2. ವೇದರಾಶಿ. **11. अभिजात** (ವಿ)—ಸತ್ಕುಲಪ್ರಸೂತ. **12. पथः, पथिन्** (ಪು)–ಶಬ್ದದ ಪಂಚಮ್ಯೇಕವಚನ. **13. सनातन** (ವಿ)—ಹಿಂದಿನಿಂದ ಬಂದ, ಸಾಂಪ್ರದಾಯಿಕ, ನಿತ್ಯ. **14. पुरुषः सिंह इव पुरुषसिंहः**—ಉಪಮಿತಸಮಾಸ. ಹೀಗೆಯೇ **नरव्याघ्र, पुरुषर्षभ** ಇತ್ಯಾದಿ. **15.** ಮರಣಕಾಲದವರೆಗೂ. 'ವರೆಗೆ' ಎಂಬರ್ಥವುಳ್ಳ **आ** ಉಪಸರ್ಗಯೋಗವಿದ್ದಲ್ಲಿ ಪಂಚಮೀ ವಿಭಕ್ತಿ ವಿಹಿತವಾಗಿದೆ. **16. अन्विच्छेत्—अनु + √इष्** VI **प**—ವಿಧಿಲಿಙ್ ಪ್ರ. ಏ. **17.** ಸಮುದ್ರಾನ್ಯೋಕ್ತಿ. ನೋಡುವುದಕ್ಕೆ ಸಮುದ್ರವರ್ಣನೆಯಾದರೂ ಕೂಡಲೆ ಲೋಕಾನುಭವವು ಜ್ಞಾಪಕಕ್ಕೆ ಬರುವುದು. ಒಳಗೊಂದು ಹೊರಗೊಂದು ರೀತಿಯಲ್ಲಿರುವ ಗೋಮುಖ ವ್ಯಾಘ್ರಗಳ ಸ್ವರೂಪವನ್ನು ಇಲ್ಲಿ ವರ್ಣಿಸಿದೆ. **18. अवलिप्त** (ವಿ)—ಅಹಂಕಾರವುಳ್ಳ. **19. मदः** (ಪು)—ಜಂಭ, ಅಹಂಕಾರ, ಗರ್ವ. **20. मृषा** (ಅ)—ವ್ಯರ್ಥವಾಗಿ, ಸುಳ್ಳಾಗಿ. **21. निद्रासि √निद्रा** II **प**—ವರ್ತಮಾನ ಮ ಏ. **22.** ಕುರಂಗಾನ್ಯೋಕ್ತಿ. ಶ್ರೀಮಂತರ ಆಶ್ರಯವನ್ನು ಹೊಂದಲೋಸುಗ, ಬೆಳಗಾದರೆ ಅವರಮುಖವನ್ನೇ ನೋಡುತ್ತಾ, ಇಂದ್ರ ಚಂದ್ರ ದೇವೇಂದ್ರರೆಂದು ಅವರನ್ನು ಹೊಗಳುತ್ತಾ, ಅವರ ಧಿಕ್ಕಾರವನ್ನು ಮಹಾಪ್ರಸಾದವೆಂದು ಅಂಗೀಕರಿಸಿ ಪುನಃ ಅವರ ಹಿಂದೆಯೇ ಹೋಗುತ್ತಾ ಜೀವನವನ್ನು ಹೊರೆಯುವ ದರಿದ್ರರಾಗಿ ಹುಟ್ಟುವುದಕ್ಕಿಂತ ಕಾಲಕಾಲಕ್ಕೆ ಗರಿಕೆಯನ್ನು ಮೆಲ್ಲುವ, ನಿದ್ರೆ ಬಂದಾಗ ನಿದ್ರಿಸುವ, ನಿರಾತಂಕವಾಗಿ ನಲಿದಾಡುವ ಜಿಂಕೆಯ ಜನ್ಮ ಲೇಸು. ಅದಾವ ತಪಸ್ಸನ್ನು ಮಾಡಿ ಇಂಥ ಸೌಖ್ಯವನ್ನು ಜಿಂಕೆ ಪಡೆಯಿತೋ! ಎಂಬದಾಗಿ ಕವಿ ದಾರಿದ್ರ್ಯವನ್ನು ಖಂಡಿಸಿ ಲಕ್ಷ್ಮೀಮದವನ್ನು ಹಿಯ್ಯಾಳಿಸಿದ್ದಾನೆ. **23.** ಇದೊಂದು ಲೋಕಾನುಭವ. ಮನುಷ್ಯನ ಆಸೆ, ನಿರೀಕ್ಷಣೆಗಳು ಅನೇಕವೇಳೆ ನಿಷ್ಫಲವಾಗುವುವು. **24. आर्द्रां कुर्वन्ति**—(ನಾಮಧಾತು). **25. एकः**—ಒಬ್ಬನೇ. ಏಕಚ್ಛತ್ರಾಧಿಪತ್ಯವುಳ್ಳವನಾಗಿ.

गङ्गावतरणम्

26. ಉತ್ತರಕಾಂಡವನ್ನು ವಾಲ್ಮೀಕರು ಬರೆದುದಲ್ಲವೆಂದೂ, ಅದು ಈಚೆಗೆ ಯಾರಿಂದಲೋ ರಚಿತವಾಗಿ ರಾಮಾಯಣದ ಜೊತೆಗೆ ಸೇರಿ ಸಲ್ಪಟ್ಟಿತೆಂದೂ ಕೆಲವರ ಅಭಿಪ್ರಾಯ. **27. अग्रजाः** (ಪು)–ಸಕಾರಾಂತ ಶಬ್ದ ; **वेधस्** ಶಬ್ದದಂತೆ. **28.** ಭೃಗುಮಹರ್ಷಿಗಳಿಂದಧಿಷ್ಠಿತವಾದ ನದಿಯು ಪ್ರವಹಿಸುವ ಬೆಟ್ಟ. ಹಿಮಾಲಯಪರ್ವತಶ್ರೇಣಿಯ ತಪ್ಪಲಲ್ಲಿದೆ. **29. व्यजायत**---ಪ್ರಸವಿಸಿದಳು. **30. समभिजायत**—ವ್ಯಾಕರಣದ ಪ್ರಕಾರ **समभ्यजायत** ಎಂದಿರಬೇಕು. ಅಡಾಗಮ ಲೋಪವಾಗಿರುವುದು ಆರ್ಷಪ್ರಯೋಗವೆಂದು ಭಾವಿಸಬೇಕು. ರಾಮಾಯಣ ಪ್ರಾಚೀನ ಗ್ರಂಥವಾದುದರಿಂದ ವ್ಯಾಕರಣ ದೋಷವಿರುವ ಪದಗಳೂ ಪ್ರಯೋಗಗಳೂ ಹೇರಳವಾಗಿ ಕಂಡುಬರುವುವು. ಮಹಾಕವಿಪ್ರಯೋಗದಂತೆ ಆರ್ಷ ಅಥವಾ ಛಾಂದಸ ಪ್ರಯೋಗಗಳು ಜ್ಞಾನಕ್ಕಾಗಿಯೇ ಹೊರತು ಅನುಸರಣೆಗಲ್ಲ. **31. विन्ध्यहिमालययोर्मध्ये मध्येविन्ध्यहिमालयम्** (ಅ) ವಿಂಧ್ಯಹಿಮಾಲಯಗಳ ಮಧ್ಯೆ ಇರುವ ದೇಶಕ್ಕೆ ಆರ್ಯಾವರ್ತವೆಂದು ಪ್ರಸಿದ್ಧಿ. **32. पर्वणि**—ಯಜ್ಞಮಧ್ಯದಲ್ಲಿ ಉಕ್ಥ್ಯವೆಂಬ ಯಾಗವನ್ನು ಮಾಡುವ ದಿವಸ. **33.** ಕೋಪವುಳ್ಳವನಾಗಿ. **34.** ಈಶಾನ್ಯದಿಕ್ಕು—**प्राच्या उत्तरस्याश्च दिशोऽन्तरालं प्रागुत्तरा : ताम्. 35. सगरस्य अपत्यं पुमान् सागरः ; ते सागराः. 36. देवस्य तस्य अविदूरतश्चरन्तं**–ಎಂಬುದಾಗಿ ಅನ್ವಯಿಸಿ. **37.** ಗುದ್ದಲಿ ಮತ್ತು ನೇಗಿಲು ಇವುಗಳನ್ನು ಹಿಡಿದವರಾಗಿ. **38. चुक्रोश–√क्रुश् I प. लिट्** ಪ್ರ. ಏ. **39.** ವೈನತೇಯನು ಸಗರನ ಎರಡನೇ ಹೆಂಡತಿಯಾದ ಸುಮತಿಯ ಸೋದರ. **40 मा शुचः–√शुच् IV उ** ಅದ್ಯತನಭೂತ (**लुङ्**) ಮ.ಏ. **अशुचत्-अशुचताम्—अशुचन्** ಇತ್ಯಾದಿ. ನಿಷೇಧವಾಚಿಯಾದ **मा** ಎಂಬ ಅವ್ಯಯದ ಯೋಗವಿದ್ದಲ್ಲಿ ಅದ್ಯತನ ಭೂತಕಾಲದ ಅಡಾಗಮವು ಲೋಪ ಹೊಂದುವುದು. ಉ. **मा गाः। मा भैर्षीः. 41. प्लावयेत्–√प्लु I आ** ಈ ಧಾತುವಿನ ಣಿಜಂತ (Causative) ರೂಪ. ವಿಧಿಲಿಙ್ ಪ್ರ. ಏ. **42.** ಅವ್ಯಯ—ದುಃಖದಿಂದ, ಕಷ್ಟದಿಂದ. **43. अभ्यगच्छत**—ಆತ್ಮನೇಪದರೂಪವು ಆರ್ಷವೆಂದು ಭಾವಿಸಬೇಕು. **44.** ಮರಣವನ್ನು.

45. प्रकृतीजनाः—ತಕಾರದಮೇಲಿನ ದೀರ್ಘವು ಛಾಂದಸವೆಂದು ಹೇಳಲ್ಪಟ್ಟಿದೆ. **46. सितैः**—(ವಿ) ಬೆಳ್ಳಗಿರುವ, ಪವಿತ್ರವಾದ. ಯಶಸ್ಕರವಾದ. **47. √जन् IV आ—लिट्** ಪ್ರ. ಏ. **48.** ಹಿಮಾಲಯ ಪರ್ವತದ ಶ್ರೇಣಿಯಲ್ಲಿ ಒಂದು ಪರ್ವತ, ಅಥವಾ ದಕ್ಷಿಣದೇಶದಲ್ಲಿರುವ ಕ್ಷೇತ್ರ. **49. पञ्चानामग्नीनां मध्ये तपो यस्य सः पञ्चतपाः. 50. मासस्य सकृदाहारो यस्य सः मासाहारः. 51.** ಸಂದರ್ಭವೊದಗಿದಾಗ ಭಗೀರಥರಾಜನಿಗೆ ಸಹಾಯಮಾಡೆಂದು ಹೇಳಿ. **52.** ವಿಸರ್ಗದ ಹಿಂದೆ **अ, आ,** ಗಳ ಹೊರತು ಬೇರೆ ಯಾವ ಸ್ವರವಿದ್ದು, ಸ್ವರವಾಗಲೀ ಮೃದುವರ್ಣವಾಗಲೀ ಪರವಾದರೆ ಆ ವಿಸರ್ಗಕ್ಕೆ ರೇಫಾದೇಶವಾಗುವುದು. **पशुपतिः + राजानं = पशुपतिर् + राजानं ;** ರೇಫಕ್ಕೆ ರೇಫ ಪರವಾದರೆ ಪೂರ್ವರೇಫಕ್ಕೆ ಲೋಪಬರುವುದು ಮತ್ತು ಅದರ ಹಿಂದಿನ ಸ್ವರವು ಹ್ರಸ್ವವಾಗಿದ್ದರೆ ದೀರ್ಘವಾಗುವುದು. **पशुपति (र्) + राजानं = पशुपती राजानम्. 53.** ಮಂಗಳಕರವಾದ, ಪವಿತ್ರವಾದ. **54.** ಭಾಗುರಿ ಎಂಬ ವೈಯಾಕರಣನ ಮತರೀತ್ಯಾ **अव** ಮತ್ತು **अपि** ಎಂಬ ಉಪಸರ್ಗಗಳಾದಿಯಲ್ಲಿನ **अ** ಕಾರಕ್ಕೆ ಲೋಪಬರುವುದು. ಉ. **अवलेप—वलेप ; अवतंस—वतंस ; अपिधान—पिधान** ಇತ್ಯಾದಿ. **55. पुनः पुनरतिशयेन वा अभ्रमत् अबम्भ्रमत् । 56. अत्यर्थं** (ಅ) ಅತಿಶಯವಾಗಿ **अतिवेलभृशात्यर्थेत्यमरः । 57.** ಹಿಮವತ್ಪರ್ವತದಲ್ಲಿ ಬ್ರಹ್ಮನು ನಿರ್ಮಿಸಿದ ಒಂದು ಸರೋವರ. **58.** ಅಡಾಗಮಾಭಾವವು ಆರ್ಷ. **58a.** ಇಲ್ಲಿ **अत एव** (ಅದರಿಂದಲೇ) ಎಂದು ಅಧ್ಯಾಹಾರ ಮಾಡಿಕೊಳ್ಳಬೇಕು. **59.** ಗಂಗಾನದಿಯಲ್ಲಿರುವ ಜಲಜಂತು ವಿಶೇಷ. **60. वि + √रुच् I आ** ಅನದ್ಯತನ (**लङ्**) ಪ್ರ. ಏ.—ಪ್ರಕಾಶಿಸಿತು. **61. गां** (ಸ್ತ್ರೀ) = ಭೂಮಿಯನ್ನು, **गो** ಶಬ್ದಕ್ಕೆ—ಸ್ವರ್ಗ, ಬಾಣ, ಪಶು, ಮಾತು, ದಿಕ್ಕು, ಕಣ್ಣು, ವಜ್ರಾಯುಧ, ಭೂಮಿ, ನೀರು ಮುಂತಾಗಿ ಅನೇಕ ಅರ್ಥಗಳಿವೆ. **62.** ಸಂಭ್ರಮದಿಂದ ಬಂದ; ದಿಗ್ಭ್ರಾಂತರಾದ. **63. द्रष्टुमिच्छवः. 64. सम् + √इ II प.—लिट्** ಪ್ರ. ಬ. **65.** ನೊರೆಗಳಿಂದ. **66. √स्पृश् I प.—लिट्** ಪ್ರ. ಬ. **67.** ಯಜ್ಞಭೂಮಿಯನ್ನು. **68.** ಆಶ್ಚರ್ಯವಾಗೋಣ ಹೇಗೋ ಹಾಗೆ. **69. अप्लावयत्** ಎಂದು ರೂಪ. ಪರಿಶುದ್ಧಿಮಾಡಿತೆಂದರ್ಥ. **70. सगरपुत्राः** ಎಂದು ಕರ್ತೃ ಅಧ್ಯಾಹೃತವಾಗಿದೆ.

मित्रलाभः

71. मित्राणां लाभः. **72.** ಅವ್ಯಯ. **73.** ಬೂರುಗದಮರ. **74.** ನಿದ್ರೆಯಿಂದೆದ್ದು. **75. द्वितीयं कृतान्तमिवायान्तं** ಎರಡನೇ ಯಮನಂತೆ ಬರುತ್ತಿದ್ದ. **76.** ಅನಿಷ್ಟವಾದ ವಸ್ತುವಿನ ದರ್ಶನವುಂಟಾಯಿತು. ಹಾಸಿಗೆಯಿಂದೆದ್ದು ಬೆಕ್ಕನ್ನು ನೋಡಿದರೆ ಅನರ್ಥಸೂಚಕವೆಂದು ನಂಬಿಕೆ. ಹಾಗೆಯೇ ಪ್ರಾತಃಕಾಲದಲ್ಲಿ ಬೇಡನನ್ನು ನೋಡಿದ್ದು ಅಪಶಕುನವೆಂದು ಕಾಗೆ ಭಾವಿಸಿತು. **77.** ವ್ಯಾಧನನ್ನನುಸರಿಸುವ ರೀತಿಯಲ್ಲಿ. **78.** ಬಲೆಯು ಬೀಸಲ್ಪಟ್ಟಿತು. **79.** ಎಚ್ಚರಿಕೆಯಿಂದ ಪರೀಕ್ಷಿಸಲ್ಪಡಲಿ. **80.** ವಿಮರ್ಶೆಮಾಡದೆ ಇರುವ. **81.** ಉದ್ಯಮ, ಕೆಲಸ. **82.** ಜೀವಿಸುವುದು ತಾನೆ ಹೇಗೆ? **83.** ತಿಳಿದಿರುವವರು, ಜ್ಞಾಪಕದಲ್ಲಿಟ್ಟಿರುವವರು. **84.** ವೇದಗಳನ್ನು ಚನ್ನಾಗಿ ಬಲ್ಲವರು. **85. √लुभ् IV प.—लिद्** ಪ್ರ.ಏ. **लुलोभ** ಎಂದಿರಬೇಕು. **लुलुभे** ಎಂಬ ಆತ್ಮನೇಪದರೂಪ ವ.ಹಾಕವಿ ಪ್ರಯೋಗವಿರಬೇಕು. **86.** ನಾಯಕನು. **87.** (ವೇದಜ್ಞಾನದಲ್ಲಿ) ಆಸಕ್ತಿ. **88.** ಒಂದೇ ಮನಸ್ಸುಳ್ಳವರಾಗಿ. **89.** ಹಗ್ಗದ ರೂಪವನ್ನು ಹೊಂದಿದ. **90. विवरं** (ನ) ಬಿಲ, ರಂಧ್ರ. **91. शतं द्वाराणि यस्य तत्. 92. विस्मयेन सहितः** ಆಶ್ಚರ್ಯಯುತನಾಗಿ. **93.** ಇಹಲೋಕದಲ್ಲಿ ನಾವು ಪಡತಕ್ಕ ಸುಖ ದುಃಖಗಳೆಲ್ಲವೂ ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯಪಾಪಗಳ ಫಲವೆಂದು ಸಾಂಪ್ರದಾಯಿಕವಾಗಿ ಬಂದ ತತ್ತ್ವ. **94.** ದೊಡ್ಡವರಾದರೇನು, ಚಿಕ್ಕವರಾದರೇನು—ನೂರಾರು ಸ್ನೇಹಿತರನ್ನು ಸಂಪಾದಿಸಬೇಕು. ಆಪತ್ಕಾಲದಲ್ಲಿ ಯಾರಾದರೂ ನೆರವಿಗೆ ಬರುವರು. **95.** ಸಕಲವೃತ್ತಾಂತವನ್ನೂ ನೋಡುತ್ತಿದ್ದ. **96. मित्रस्य भावः मैत्र्यं, तेन. 97.** ಲೋಕದಲ್ಲಿ ಯಾವ್ಯಾವುದು ಒಟ್ಟು ಸೇರಲು ಯೋಗ್ಯವೋ, ಬುದ್ಧಿವಂತನಾದವನು ಅದದನ್ನೇ ಸೇರಿಸಲು ಯತ್ನಿಸಬೇಕು. **98. त्वयि जीवति सति. 99. चपल** (ವಿ) ಚಂಚಲಬುದ್ಧಿಯುಳ್ಳ. **100.** ರಹಸ್ಯಸಂಭಾಷಣೆಗಳಿಂದ, ಪ್ರೀತಿಯ ಸಲ್ಲಾಪಗಳಿಂದ. **101. अन्यत् स्थानं**

स्थानान्तरम्. 102. पुण्यानि कर्माणि येषां ते पुण्यकर्माणः, तेषाम्. 103. आवसथः ವಾಸಿಸುವ ಮನೆ. **104.** ಕೂಡಿಡಲ್ಪಟ್ಟ. **105.** ಅವ್ಯಯ. ನಿರ್ದಯವಾಗಿ. **106. सत्त्वं** (ನ)=ಧೈರ್ಯ. **107.** ಸ್ನೇಹ ಮತ್ತು ಸಹವಾಸ ಇವುಗಳಿಂದ. **108. रसवती च ते फले च. 109.** ಗಳಿಸಿದ ದ್ರವ್ಯವನ್ನನುಭವಿಸಬೇಕು. ಇಲ್ಲದಿದ್ದರೆ ಇತರರಿಗೆ ಉಪಯೋಗವಾಗುವಂತೆ ದಾನಧರ್ಮಗಳನ್ನು ಮಾಡಬೇಕು. ಎಷ್ಟೋ ಜನರು ತಮ್ಮ ಐಶ್ವರ್ಯವನ್ನು ಅನುಭವಿಸುವುದೂ ಇಲ್ಲ, ಇತರರಿಗೆ ಸಹಾಯಮಾಡುವುದೂ ಇಲ್ಲ. ನಿಷ್ಫಲವಾದ ಆ ಧನದಿಂದ ಅವರು ಧನಿಕರೆಂದೆನಿಸಿದರೆ, ಅಂಥ ಧನವಿಲ್ಲದಿರುವ ನಾವೂ ಏಕೆ ಧನಿಕರೆಂದೆನಿಸಬಾರದು? **110.** ಮೂಢನಾಗುವುದಿಲ್ಲ. **111.** ಅತಿ ನಿಧಾನದ, ತಾಮಸಪ್ರಕೃತಿಯುಳ್ಳ. **112.** ಕೆಸರು ತೊಳೆದುಕೊಳ್ಳುವುದಕ್ಕಿಂತ ಕೆಸರು ಮಾಡಿಕೊಳ್ಳದಿರುವುದೇ ಲೇಸು. **113.** ಭಾರವನ್ನು ಹೊರುವವರು, ಜವಾಬ್ದಾರರು. **114.** ಒಳ್ಳೆಯದು. **115.** ಕ್ರಿಯಾವಿಶೇಷಣ, ಸ್ವಂತಮನೆಯಿಂದ ಬೇರೆಯಲ್ಲದಿರೋಣ ಹೇಗೋ ಹಾಗೆ. **116.** ಕಳಿಂಗದೇಶದಲ್ಲಿ. **विषयः** (ಪು)=ದೇಶ. **117. समावासिताः कटकाः येन सः । कटकः** (ಪು) **कटकं** (ನ)=ಸೈನ್ಯ; ಮನೆ; ರಾಜಧಾನಿ; ವಲಯ, ಬಳೆ ಎಂದು ನಾನಾರ್ಥ. **118.** ಸಂದರ್ಭಕ್ಕನುಗುಣವಾದ ಕೆಲಸವು. **119.** Misfortunes do not come single. **120.** ದುಃಖವೆಂಬ ಶತ್ರುವಿನಿಂದ ರಕ್ಷಿಸತಕ್ಕ, ಪ್ರೀತಿವಿಶ್ವಾಸಗಳಿಗೆ ಪಾತ್ರವಾದ, ಆದರೂ ಎರಡೇ ಎರಡು ಅಕ್ಷರವುಳ್ಳ ಮಿತ್ರವೆಂಬ ರತ್ನವನ್ನು ಯಾವ ಮಹಾತ್ಮನು ಸೃಷ್ಟಿಮಾಡಿದನೋ! **121.** ಚನ್ನಾಗಿ ಆಲೋಚಿಸದೆ ಕೆಲಸಮಾಡಿದ ನನಗೆ. **123.** ಯಾವನು ನಿಶ್ಚಯವಾಗಿರುವುದನ್ನು ಬಿಟ್ಟು ಅನಿಶ್ಚಿತವಾದುದನ್ನು ಹುಡುಕಿಕೊಂಡು ಹೋಗುತ್ತಾನೆಯೋ ಅವನಿಗೆ ನಿಶ್ಚಯವಾಗಿರುವುದೂ ನಷ್ಟವಾಗಿಹೋಗುವುದು. ಅನಿಶ್ಚಿತವಂತೂ ನಷ್ಟವೇಸರಿ. "**इतो भ्रष्टस्ततो भ्रष्टः**" ಎಂಬ ಗಾದೆಯೂ ಇದೇ ಅರ್ಥವುಳ್ಳದ್ದು. **124. कटकः** 117ನೇ ಟಿಪ್ಪಣಿಯನ್ನು ನೋಡಿ. **125.** ಹೊಸದಾಗಿ ಮದುವೆಯಾದ ಕನ್ಯೆಯಂತೆ.

उदयनकथा

126. वर्षः (ಪು) ಪ್ರಪಂಚದ ಒಂದು ಭಾಗ. ಜಗತ್ತು 9 ವರ್ಷಗಳಾಗಿ ಭಾಗವಾಗಿದೆ. ಅದರಲ್ಲಿ ಭಾರತವೆಂಬುದೂ ಒಂದು. **127.** ಅರ್ಜುನನ ವಂಶದಲ್ಲಿ. **128.** ರಾಜ್ಯವೆಂಬ ಸಮುದ್ರಕ್ಕೆ ನಾವಿಕ. **129.** ಬೇಟೆಯಾಡುವ ಸನ್ನಿವೇಶದಿಂದ. **130.** **णिजन्त** ಕ್ರಿಯಾಪದ, ಯಾಗಮಾಡಿಸಿದನು. **131.** ದೇವಾಸುರಯುದ್ಧದಲ್ಲಿ. **132.** ಚಂದ್ರನನ್ನು ಉದರದಲ್ಲಿ ಧರಿಸಿರುವ ಇಂದ್ರನ ದಿಕ್ಕು ಅಂದರೆ ಪೂರ್ವದಿಕ್ಕಿನೋಪಾದಿಯಲ್ಲಿ. **पुरन्दरस्येयम्.** **133.** ಗರ್ಭಿಣಿಯಾದ. **134.** ಮಂತ್ರಾಲೋಚನೆಯಲ್ಲಿ ಕುಶಲನಾದ. **135.** ಕೇಸರೀ ನೀರಿಗೆ ಆಶ್ರಯವಾದ, **कुसुम्भः** (ಪು.ನ.) ಕೇಸರೀಹೂ. **136.** ಈ ರೀತಿಯಾಗಿ ಮರುಳಾದ. **137.** ಭಯಂಕರವಾದ. **138.** ಭಯವಿಶಿಷ್ಟವಾದ ದೃಷ್ಟಿಯಿಂದ ದಿಕ್ಕುದಿಕ್ಕುಗಳನ್ನೂ ನೋಡಲಾರಂಭಿಸಿದಳೆಂಬ ಭಾವವನ್ನು ಕವಿಯು ಹೀಗೆ ಉತ್ಪ್ರೇಕ್ಷಿಸಿದ್ದಾನೆ. ಭಯದಿಂದ ಬೇಗ ಬೇಗ ಅಲ್ಲಿ ಇಲ್ಲಿ ನೋಡಿದುದರಿಂದ ತನ್ನ ಕಣ್ಣುಗಳೆಂಬ ನೀಲೋತ್ಪಲಗಳನ್ನು ಸುತ್ತಲೂ ಬಿಸುಟಳೊ ಎಂಬಂತೆ ಕಾಣುತ್ತಿತ್ತು. **139.** ಪತಿಯನ್ನಗಲಿ ಕಾಡಿನಲ್ಲಿ ಪಡುವ ಭವಣೆಗಿಂತ ದುಷ್ಟ ಮೃಗಗಳ ಬಾಯಿಗೆ ತುತ್ತಾಗುವುದು ಲೇಸೆಂದು ಭಾವಿಸಿದಳು. **140.** ಬಡಪ್ರಾಣಿ. **141.** ಮೆಲುಕುಹಾಕುವುದನ್ನು ಬಿಟ್ಟಂಥ. **142.** ಅಲ್ಲಾಡದೆ ಇರುವ ಸ್ಥಿತಿಯುಳ್ಳ. **143.** ತಾಯಿಯ ಇಷ್ಟಾರ್ಥಗಳೊಡನೆ; ಮಗನು ಬೆಳೆದ ಹಾಗೆಲ್ಲಾ ತಾಯಿಯ ಮನಸ್ಸಿನಲ್ಲಿ ಅವನ ಅಭಿವೃದ್ಧಿಗಾಗಿ ಆಕಾಂಕ್ಷೆಯು ಮುಂದುವರಿಯುತ್ತಿತ್ತು. ಅದಕ್ಕೆ ತಕ್ಕಹಾಗೆ ಮಗನೂ ಅಭಿವೃದ್ಧಿಯಾಗುತ್ತಿದ್ದನು. **144.** ತನ್ನ ವಾಸಸ್ಥಾನವನ್ನು. **आश्रयः** (ಪು). **145.** ವ್ಯಾಧನು. **146.** 117ನೇ ಟಿಪ್ಪಣಿಯನ್ನು ನೋಡಿ. **147.** ವಿಸ್ತರಿಸಲ್ಪಟ್ಟ, ವರ್ಣಿಸಲ್ಪಟ್ಟ. **148.** ಉದಯನ ಮತ್ತು ಮೃಗಾವತಿ ಇವರ ಸಮಾಗಮವನ್ನು ಪಡೆದು. **149.** ಇಂದ್ರನಿಂದ ರಕ್ಷಿತವಾದ ಪೂರ್ವದಿಕ್ಕನ್ನು. **150.** **निर्गतं वैरं येभ्यस्ते निर्वैराः ; हरयश्च कुञ्जराश्च हरिकुञ्जराः ; निर्वैराः हरिकुञ्जराः यस्मिन् सः ; तम् ।**

ಪರಸ್ಪರ ವೈರವನ್ನು ಬಿಟ್ಟ ಸಿಂಹ ಮತ್ತು ಆನೆಗಳುಳ್ಳ. **151**. ಶತಾನೀಕನು ತನ್ನ ಹತ್ತಿರ ಇದ್ದ ಯುಗಂಧರನೇ ಮೊದಲಾದ ಮಂತ್ರಿ, ಸೇನಾಪತಿ, ವಿದೂಷಕ ಇವರುಗಳ ಮಕ್ಕಳಾದ ಯೌಗಂಧರಾಯಣ, ರುಮಣ್ವಂತ, ವಸಂತಕ ಇವರನ್ನೇ ಉದಯನಕುಮಾರನ ಸಹಾಯಕರನ್ನಾಗಿ ನೇಮಿಸಿದನು. **152**. ಹಾಸ್ಯತತ್ಪರನಾದ ಜೊತೆಗಾರ, ನಕಲಿಯವನು, ವಿದೂಷಕ. **153**. ಗಾಳಿಯಿಂದ ಅಲ್ಲಾಡುವ ಬಾಳೆ ಎಲೆಯಷ್ಟು ಚಂಚಲವಾದ ಜೀವನವನ್ನು ಕುರಿತು ಚಿಂತಿಸುತ್ತಾ. **154**. ಪರಲೋಕವನ್ನೈದಿದನು. **155**. ಅರ್ಜುನನು ಮಾಡಿದ ಸಾಹಸಗಳಲ್ಲಿ ಜನರಿಗೆ ಆದರವು ಸಡಿಲವಾಗುವಂತೆ ಮಾಡಿದನು. ಅಂದರೆ ಸಾಹಸದಲ್ಲಿ ಅರ್ಜುನನನ್ನು ಮೀರಿಸಿದನೆಂದು ತಾತ್ಪರ್ಯ. **156**. **यौगन्धरायणे न्यस्तो राज्यस्य चिन्ताया भारो येन सः**. **157**. ಕಾರಣವಾವುದೂ ಇಲ್ಲದೆ ಸ್ವಭಾವತಃ ಶತ್ರುವಾದ ಉದಯನನು. **158**. ಅನುರಕ್ತರಾದ ಮಂತ್ರಿಗಳುಳ್ಳವನು. **159**. ಬೇಟೆಯ ನೆಪದಿಂದಲ್ಲದೆ. **160**. ಸಾಮ, ದಾನ, ಭೇದ, ದಂಡವೆಂಬ ಚತುರೋಪಾಯಗಳಿಂದ. **161**. ದುರ್ಗಾದೇವಿಯನ್ನು ಕುರಿತು ತಪಸ್ಸುಮಾಡಿ ಪಡೆದ ಅನುಗ್ರಹದಿಂದ. **162**. ಕೃತ್ರಿಮವಾದ ಸ್ನೇಹದ ಉಡುಗೆರೆ ಮೊದಲಾದುವುಗಳೊಡನೆ. **163**. ಸಂಗೀತವಿದ್ಯೆಯನ್ನು ಬಲ್ಲಂಥ. **164**. ದೊಡ್ಡವರು ಮಾಡುವ ಪ್ರಾರ್ಥನೆಗಳನ್ನು ಸಜ್ಜನರು ತಿರಸ್ಕರಿಸುವುದಿಲ್ಲವಲ್ಲವೇ? **165**. ಎದುರು ಜವಾಬು. **166**. ಕ್ರೋಧ, ದ್ರೋಹ, ಈರ್ಷ್ಯಾ, ಅಸೂಯಾ ಈ ಅರ್ಥಗಳುಳ್ಳ ಧಾತುಗಳ ಯೋಗವಿದ್ದಲ್ಲಿ ಯಾರನ್ನು ಕುರಿತು ಈ ಕ್ರಿಯೆಗಳು ನಡೆಯುತ್ತವೆಯೋ ಆ ಪದಗಳ ಮೇಲೆ ಚತುರ್ಥೀವಿಭಕ್ತಿ ಬರುವುದು. **167**. √**कुप्** IV **प.**—**लिट्** ಪ್ರ. ಏ. **168**. ಹುಬ್ಬುಗಂಟಿಕ್ಕಿ. **169**. ಕೋಪದ ರಭಸದಿಂದ ಅಲ್ಲಾಡುತ್ತಿದ್ದ ಕರ್ಣಾಭರಣವುಳ್ಳ. **170**. ಭ್ರಾಂತಿಯಿಂದ ಊದಿದ (ಗರ್ವಿತವಾದ) ಮನಸ್ಸುಳ್ಳ. **171**. ಕೋಪಸಾಗರದ ಆಚೆ ದಡವನ್ನು ತಲಪುತ್ತೇನೆ. ಕೋಪವನ್ನು ತೀರಿಸಿಕೊಳ್ಳುತ್ತೇನೆ. **172**. ಪ್ರಭು, ಸುಖದಲ್ಲಿಯೇ ಮಗ್ನನಾದ ನಿನ್ನಿಂದಲೇ ನಮ್ಮ ತೇಜಸ್ಸೆಲ್ಲವೂ ತಣ್ಣಗಾಯಿತು. **173**. ಶತ್ರುವರ್ಗದವರು ಸ್ವಲ್ಪ ತಲೆಯೆತ್ತಿಕೊಂಡಂತೆ ಕಾಣುತ್ತದೆ. **174**. **कुनयः** (ಪು) ತಪ್ಪಾದ ರಾಜನೀತಿ. **विनयः**—(ಅತಿಯಾದ) ಮೃದುಸ್ವಭಾವ. **प्रणयः**—ಪ್ರೀತಿ, ವ್ಯಾಮೋಹ. √**नी** I **प.**—ಈ ಧಾತುವಿಗೆ ಉಪಸರ್ಗಗಳ ಯೋಗದಿಂದುಂಟಾದ

ಅರ್ಥಾಂತರಗಳನ್ನು ನೋಡಿ. 175. ಹಿಮ್ಮೆಟ್ಟುವುವು. 176. ವರಾಹ ರೂಪಿಯಾದ. 177. ಮದುವೆಯಾದನು. 178. ಕಿವಿಯಲ್ಲಿ ಕೇಳಿದ ನಷ್ಟ. 179. आक्रान्तं स्वान्तं यस्य सः । ಆಕ್ರಮಿಸಲ್ಪಟ್ಟ ಮನಸ್ಸುಳ್ಳವನು. 180. ನೀರಿನಲ್ಲಿಡಲ್ಪಟ್ಟ ಕಾಲುಳ್ಳದ್ದನ್ನಾಗಿ. अम्भसि कृताः पदो यस्य सः । तम्. 181. पण्डितमात्मानं मन्यत इति पण्डितमानी. 182. ಆನೆಗಳನ್ನು ಹಿಡಿಯುವುದರಲ್ಲಿ ನಿಪುಣನಾದ ವತ್ಸರಾಜನು. 183. ಅಹಂಕಾರವು ಹೇಗೆ ಉನ್ನತ ಅಂದರೆ ಹೆಚ್ಚಾಗಿರುವುದೋ ಹಾಗೆ ಎತ್ತರವಾದ, ಸಂಸಾರವು ಹೇಗೆ ನಿಸ್ಸಾರವಾದುದೋ ಹಾಗೆ ನಿಸ್ಸಾರವಾದ ಅಂದರೆ ಟೊಳ್ಳಾದ, ಐಶ್ವರ್ಯವು ಹೇಗೆ ಚಂಚಲವೋ ಹಾಗೆ ಚಂಚಲವಾದ ಅಂದರೆ ಅಲ್ಲಿ ಇಲ್ಲಿ ಸುಳಿದಾಡುತ್ತಿದ್ದ, ಅಧರ್ಮವು ಹೇಗೆ ಮಾಯೆ ಅಥವಾ ಅಜ್ಞಾನದಿಂದ ಕೂಡಿದ್ದೋ ಹಾಗೆ ತಂತ್ರವಿಶಿಷ್ಟವಾದ ದೊಡ್ಡ ಆನೆಯನ್ನು ನೋಡಿದನು. 184. ಕೃತ್ರಿಮದ ಆನೆ. 185. ग्रहीतुमिच्छुः. 186. ಯಂತ್ರದ ಸಹಾಯದಿಂದ ಕೃತಕವಾದ. 187. ದೊಡ್ಡವರಾದರೂ ಕೂಡ ಅವರು ಚಾಪಲ್ಯಗಳಲ್ಲಿ ಹೆಚ್ಚು ಆಸಕ್ತಿಯಿಟ್ಟರೆ ವಿವೇಕರಹಿತರಾಗುತ್ತಾರೆ. 188. ಧೈರ್ಯದಿಂದ ಕದಲದ ಮನಸ್ಸುಳ್ಳವನಾಗಿ. 189. ಪಾಪಬುದ್ಧಿ. 190. ವೀಣಾವಾದನ, ಸಂಗೀತವಿದ್ಯೆ (ಹಾಡುಗಾರಿಕೆ) ಈ ಕಲೆಗಳಲ್ಲಿ ಜ್ಞಾನಹೊಂದುವ ವಿಷಯದಲ್ಲಿ. 191. ಚಪಲಚಿತ್ತನು. 192. ಪ್ರಕಾಶಿಸಿದಳು, √भा II प.—लिट् ಪ್ರ. ಏ. 193. ಉಜ್ಜಯಿನಿಯ ಮಹಾಕಾಲೇಶ್ವರನು ಭರತ ವರ್ಷದಲ್ಲಿ ಪ್ರಸಿದ್ಧರಾದ ದ್ವಾದಶೇಶ್ವರರಲ್ಲಿ ಒಬ್ಬನೆಂದು ಪ್ರತೀತಿ. 194. ಶ್ಮಶಾನವರ್ಣನೆ, ಸಿಡಿದ ಕಪಾಲಗಳಿಂದ ಕೀರ್ಣವಾದ, ಚಟಚಟ ಗುಟ್ಟುವ ಚಿತೆಗಳಲ್ಲಿ ಉರಿಯುತ್ತಿದ್ದ ಬೆಂಕಿಯುಳ್ಳ ಶ್ಮಶಾನವು ಭಯಂಕರವಾಗಿತ್ತು. 195. ವೇಷಬದಲಾಯಿಸುವ. 196. ಬೋಳುತಲೆಯವನು. 197. ಐದು ಜಡೆಯುಳ್ಳವನು. 198. ದೊಡ್ಡ ದವಡೆಗಳುಳ್ಳವನು. 199. ಗೂನು ಬೆನ್ನಿನವನು. 200. ತಪ್ಪುತಪ್ಪು ನಡಿಗೆಯುಳ್ಳ, ಎಡವುವ. 201. ಮಾಯಾವಾದನು. 202. ಸಂಕೇತಕ್ಕನುಸಾರವಾಗಿ ಕುರೂಪಿಯಾಗಿದ್ದ. 203. ನಡೆ ಮತ್ತು ಅಭಿನಯಗಳಿಂದ; ಹಾವಭಾವಗಳಿಂದ. 204. ವಿಶೇಷವಾಗಿ ನೆಲಸಿದ ನಂಬಿಕೆಯುಳ್ಳ. 205. ಮಂಗಳಕರವಾದ. 206. ಸಲ್ಲಕ್ಷಣಗಳಿಂದ ಯೋಗ್ಯವಾದ. 207. ಆಷಾಢಕನೆಂದು ಹೆಸರುಳ್ಳ

ಮಾವಟಿಗನನ್ನು. **208**. ಪ್ರೇಮಕ್ಕೂ ನಂಬಿಕೆಗೂ ಪಾತ್ರಳಾದ. **प्रेम्णो विश्वासस्य च भूः। तया** **209**. **नगररक्षिन् शब्दः, द्वितीया बहुवचनान्तः.** **210**. ಯಾವಾಗಲೂ ಅತಿಯಾಗಿ ಕೋಪಮಾಡಿಕೊಳ್ಳ ತಕ್ಕವನು, ಕೋಪಶೀಲ. **211**. ವತ್ಸರಾಜನು ನಮಗೆ ಮಾನ್ಯನು, ಬೇಕಾದವನು. **212**. **विगतः कोपो यस्य सः.** **213**. ಕಿವಿಯ ವರೆಗೂ ಎಳೆದ ಧನುಸ್ಸುಳ್ಳ, **कर्णात् आ आकर्णं ; आकर्णं आश्रितः कोदण्डो यस्य सः.** **214**. 8ನೇ ಟಿಪ್ಪಣಿಯನ್ನು ನೋಡಿ. **215**. 52ನೇ ಟಿಪ್ಪಣಿಯನ್ನು ನೋಡಿ. **216**. ಚಕ್ರಾಯುಧ, ಗದೆ ಮತ್ತು ಧನುಸ್ಸು ಇವುಗಳನ್ನು, **चक्रं च तोमरं च कार्मुकं च चक्रतोमर-कार्मुकम्। जात्येकवचनम्.** **217**. ಗೌರವದಿಂದ, ನಮ್ರತೆಯಿಂದ. **218**. ವರ್ತಕರ ಮಾತನ್ನು. **219**. 52ನೇ ಟಿಪ್ಪಣಿ ನೋಡಿ. **220**. ಗುಂಡಗೆ ಪ್ರಕಾಶಮಾನವಾದ ಮುತ್ತಿನ ಹಾರದಿಂದಲಂಕೃತಳಾಗಿ. **221**. ಎರಚಿದ್ದ ಅರಳು ಮತ್ತು ಹೂ ಇವುಗಳುಳ್ಳ, **लजाश्च कुसुमानि च लाजकुसुमानि। विक्षिप्तानि लाजकुसुमानि यस्यां सा.** **222**. ಲಾಜಕುಸುಮಗಳಿಂದ ಕೀರ್ಣವಾದ ವಿವಾಹಭೂಮಿಯು ವಾಸವದತ್ತಾದೇವಿಯ ಮುಖಚಂದ್ರನ ಮೇಲಿನ ಪ್ರೀತಿಯಿಂದ ಭೂಲೋಕಕ್ಕೆ ಬಂದ ನಕ್ಷತ್ರಗಳಿಂದ ತುಂಬಿತ್ತೋ ಎಂಬಂತೆ ಪ್ರಕಾಶಿಸಿತು. **223**. ವಿವಾಹ ಸಮಾರಂಭಕ್ಕೆ ಸಂಬಂಧಪಟ್ಟ. **224**. ಕಷ್ಟಕಾಲದಲ್ಲಿಯೂ ಕೂಡ. **225**. ತುಟ್ಟತುದಿಯನ್ನು ; ಅತಿಶಯವಾದ ಆನಂದವನ್ನು ಹೊಂದಿದರೆಂದರ್ಥ.

Note :—ಈ ಟಿಪ್ಪಣಿಯಲ್ಲಿ ಉಪಯೋಗಿಸಿರುವ ಸಂಕೇತಾಕ್ಷರಗಳು ಸಾಮಾನ್ಯವಾಗಿ ವ್ಯಾಕರಣವನ್ನೋದುವಾಗ ಎಲ್ಲರಿಗೂ ಪರಿಚಿತವಾದುದರಿಂದ ಪಂಡಿತರು ವಿದ್ಯಾರ್ಥಿಗಳಿಗೆ ಅನಾಯಾಸವಾಗಿ ತಿಳುವಳಿಕೆ ಕೊಡಬಹುದೆಂದು ನಂಬಿಕೆ.

॥ शुभं भूयात् ॥

———